**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಹುಕ್ಕೇರಿ**

**ಸಿಸಿ ನಂ ಃ 186/2021**
**ಸಿಡಬ್ಲು ಃ 10**
**ಪಿಡಬ್ಲು ಃ 6**

**ಹೆಸರು** ಃ ಅಬ್ದುಲ ಕಲಾಂ ಅಬ್ದುಲ ಹಮೀದ ಮುಲ್ಲಾ
ತಂದೆ ಹೆಸರು ಃ ಅಬ್ದುಲ ಹಮೀದ ಮುಲ್ಲಾ
**ವಯಾ** ಃ 64 ವರ್ಷ
**ಉದ್ಯೋಗ** ಃ ನಿವೃತ್ತ ಎ ಎಸ್ ಐ
**ವಾಸ** ಃ ಬೆಳಗಾವಿ

**(ದಿನಾಂಕಃ 23-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

**1.** ನಾನು **2010** ರಿಂದ **2015** ರ ವರೆಗೆ ನಾನು ಮುಖ್ಯ ಪೇದೆಯಾಗಿ ಅಲಾನಿ ದಳ ಗೋಕಾಕನಲ್ಲಿ ಕರ್ತವ್ಯ ಮಾಡಿರುತ್ತೇನೆ.

**2.** ದಿನಾಂಕ **27-07-2014** ರಂದು ಮಧ್ಯಾಹ್ನ **14-15** ಗಂಟೆಗೆ ನಾನು ಎಸ್ ಎಚ್ ಓ ಕರ್ತವ್ಯದಲ್ಲಿದ್ದಾಗ ಪಿ ಎಸ್ ಐ ಎಮ್ ವಿ ಬಡಿಗೇರ ಇವರು ಸರಕಾರಿ ತರ್ಪೆ ಫಿರ್ಯಾದನ್ನು ನನ್ನ ಮುಂದೆ ಹಾಜರ ಮಾಡಿರುತ್ತಾರೆ. ಅದನ್ನು ಪರಿಶೀಲಿಸಿ ನಾನು ನಮ್ಮ ಠಾಣಾ ಗುನ್ಹಾ ನಂ. **64/2014** ರಂತೆ ಪ್ರಕರಣ ದಾಖಲಿಸಿರುತ್ತೇನೆ. ಸದ್ರಿ ದೂರನ್ನು ನಾನು ಈಗ ನೋಡುತ್ತಿದ್ದೇನೆ . ಅದರಲ್ಲಿ ನನ್ನ ಸಹಿ ಇದೆ. ಅದನ್ನು ಈಗಾಗಲೇ ನಿ.ಪಿ-**5** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-**5**(ಬಿ) ಎಂದು ಗುರುತಿಸಲಾಯಿತು. ಮೂಲ ಎಫ್ ಐ ಆರ್ ನ್ನು ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿ.ಪಿ-**9** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ-**9**(ಎ) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಐ ವಾಯ್ ಜೆ ವಕೀಲರಿಂದ -**

**3.** ಚಾಸಾ-**1** ಮತ್ತು **11** ಇವರು ನಮ್ಮ ಮೇಲಾಧಿಕಾರಿ. ಚಾಸಾ-**1** ರವರ ಮಾತು ಕೇಳಿ ನಾನು ಸುಳ್ಳು ಎಫ್ ಐ ಆರ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಎಫ್ ಐ ಆರ್ ನ ಕಾಲಂ ನಂ. 3ಡಿ ಯಲ್ಲಿ ಜನರಲ್ ಡೈರಿ ಉಲ್ಲೇಖ ಸಂಖ್ಯೆ ಖಾಲಿ ಇದೆ ಎಂದರೆ ನಿಜ. ಚಾಸಾ-**1** ರವರು ಟೈಪ ಮಾಡಿದ ದೂರನ್ನು ಡಬ್ಲ್ಯೂ ಪಿಸಿ- **2523** ಇವರ ಕಡೆಯಿಂದ ಟೈಪ ಮಾಡಿಸಿದ್ದೇವೆ.

ಸಾಮಾನ್ಯವಾಗಿ ನಮ್ಮ ಮೇಲಾಧಿಕಾರಿ ಆದೇಶವನ್ನು ನಾನು ಪಾಲಿಸುತ್ತೇವೆ ಎಂದರೆ ನಿಜ. ಆರೋಪಿಯ ಯಾವುದೇ ತಪ್ಪು ಕಂಡು ಬರದೇ ಇದ್ದರೂ ನಾನು ಎಫ್ ಐ ಆರ್ ಮಾಡಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗೋಸ್ಕರ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯುನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**